ಎಚ್ಚತ್ತಿದ್ದಳು. ‘ಬೇಡ... ಬೇಡ...’ ಎಂದು ಎದ್ದು ನಿಂತ ಅವಳನ್ನು ‘ಮಗುವಿನ ಆಪರೇಷನ್ನಿಗೆ ಹಣ ಬೇಡವೇ...’ ಎನ್ನುತ್ತ ಹಿಡಿದುಕೊಳ್ಳಲು ಬಂದರೆ ಅವನನ್ನು ತಳ್ಳಿಕೊಂಡೇ ನುಗ್ಗಿ ಬಾಗಿಲನ್ನು ತೆರೆದುಕೊಂಡು ಓಡಿಕೊಂಡೇ ಹೊರ ಹೋಗಿದ್ದಳು. ಅಂಗಡಿಯ ಕೆಲಸಗಾರರು, ಗಿರಾಕಿಗಳು ಬಾಯಿ ತೆರೆದುಕೊಂಡು ನೋಡುತ್ತಲೇ ಇದ್ದರು.

★★★

ಆಸ್ಪತ್ರೆಯವರೆಗೆ ಓಡುತ್ತಲೇ ಬಂದ ಅವಳಲ್ಲಿ ಉದ್ವೇಗ ಅಡಗಿರಲಿಲ್ಲ. ಮಗುವಿನ ಚಿಂತೆಯೊಂದಿಗೆ ಹಣ ಸಿಗಬಹುದಾಗಿದ್ದ ಕೊನೆಯ ದಾರಿಯೂ ಮುಚ್ಚಿ ಹೋಯಿತಲ್ಲ ಎನ್ನುವುದೂ ಸೇರಿ ಆಕೆ ಪೂರ್ಣ ಹೈರಾಣಾಗಿದ್ದಳು. ಮಗುವಿನ ಬಗ್ಗೆ ಇದ್ದ ಅಂತಿಮ ಆಸೆಯ ತಂತುವೂ ಕಡಿದು ಹೋಗಿತ್ತು. ದುಃಖ, ಅಸಹಾಯಕತೆ ಅವಳಿಗೆ ತನ್ನ ಮೇಲೆಯೇ ಜಿಗುಪ್ಸೆ ಉಂಟಾಗುವಂತೆ ಮಾಡಿದ್ದುವು. ಯಾಕೋ ಬೇಡ ಬೇಡವೆಂದರೂ ಕೃಷ್ಣನೇ ನೆನಪಾಗಿದ್ದ. ಅಲ್ಲಿ ಅವನ ಕಪ್ಪು ಮುಖವಲ್ಲ ತನ್ನ ಬಗ್ಗೆಯಿದ್ದ ಪ್ರೀತಿ, ಕಾಳಜಿ ಮಾತ್ರ ಕಾಣಿಸಿತ್ತು. ಅಳುತ್ತಲೇ ಆಸ್ಪತ್ರೆಯ ಒಳಗೆ ಬಂದರೆ ನಗುತ್ತ ನಿಂತಿದ್ದ ಡಾಕ್ಟರು, ‘ಆಪರೇಷನ್ ಆಯಿತಮ್ಮ. ಮಗು ಬಚಾವು. ಇನ್ನೇನೂ ತೊಂದರೆಯಿಲ್ಲ’ ಎಂದಿದ್ದರು. ‘ಸರ್... ಸರ್... ಹಣ...’ ಈಕೆ ತೊದಲುತ್ತಿದ್ದರೆ ಅಲ್ಲಿಯೇ ನಿಂತಿದ್ದ ನರ್ಸ್ ಹೇಳಿದ್ದಳು: ‘ಹಣವೆಲ್ಲ ಆಗಲೆ ಕಟ್ಟಿಯಾಯ್ತು’. ಆಶ್ಚರ್ಯದಿಂದ ಒಳಗೋಡಿದ ಅವಳನ್ನು ಸ್ವಾಗತಿಸಿದ್ದು ನಸು ನಗುತ್ತಿರುವ ಅವಳ ಮಗ. ಸಮಾಧಾನದ ನಿಟ್ಟುಸಿರೆಳೆದ ಅವಳು ಯಾರು ಹಣ ಕೊಟ್ಟವರು ಎಂದು ನೋಡಲು ನರ್ಸಿನ

